ಆ) ಸಮುದ್ರ ಕೊರೆತವನ್ನು ತಡೆಗಟ್ಟಲು ಸರ್ಕಾರವು ಸಮುದ್ರ ಕೊರೆತ ರಕ್ಷಣಾ ತಡೆಗೋಡೆಗಳನ್ನು 1979-80 ರಿಂದಲೂ ನಿರ್ಮಿಸಲಾಗಿದೆ

ಇ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 1995-96, 1996-97ನೇ ಸಾಲುಗಳಲ್ಲಿ ರಕ್ಷಣಾ ಗೋಡೆ ರಚನೆಗಾಗಿ ಕ್ರಮವಾಗಿ ರೂ. 380.27 ಲಕ್ಷ ಮತ್ತು 375.85 ಲಕ್ಷ ಹಣವನ್ನು ವೆಚ್ಚ ಮಾಡಲಾಗಿದೆ.

ವಿಷಯ : ಸಮುದ್ರ ಕೊರೆತವನ್ನು ನಿಲ್ಲಿಸಲು ಕೈಗೊಂಡ ಶಾಶ್ವತ ಕ್ರಮಗಳು

253 (2369)-ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) : ಮಾನ್ಯ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಸಮುದ್ರ ಕೊರೆತವನ್ನು ನಿಲ್ಲಿಸಲು ಸರ್ಕಾರವು ಕೈಗೊಂಡಿರುವ ಶಾಶ್ವತ ಕ್ರಮಗಳೇನು

ಆ) ಅದನ್ನು ಪೂರ್ಣಗೊಳಿಸಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು ?

ಶ್ರೀ ತಿಪ್ಪೇಸ್ವಾಮಿ (ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು)

ಅ) ಸಮುದ್ರ ಕೊರೆತವನ್ನು ತಡೆಗಟ್ಟಲು ಸರ್ಕಾರವು ಸಮುದ್ರ ಕೊರೆತ ತಡೆಗೋಡೆಗಳನ್ನು 1979-80 ರಿಂದಲೂ ನಿರ್ಮಿಸಲಾಗುತ್ತಿದೆ. ಈ ತಡೆಗೋಡೆಗಳನ್ನು ನಿರ್ದೇಶಕರು ಕೆ.ಇ.ಓಆರ್.ಎಸ್. ಕೆ.ಆರ್. ಸಾಗರ ಮತ್ತು ನಿರ್ದೇಶಕರು, ಕೆ. ಇ.ಆರ್. ಎಸ್, ಕೆ. ಆರ್. ಸಾಗರ ಮತ್ತು ನಿರ್ದೇಶಕರು, ಸೆಂಟ್ರಲ್ ವಾಟರ್ ಅಂಡ್ ಪವರ್ ರಿಸರ್ಚ್ ಸ್ಟೇಷನ್ ಮಣಿ, ಇವರುಗಳು ನೀಡಿರುವ ವಿನ್ಯಾಸದಂತೆ ನಿರ್ಮಿಸಲಾಗುತ್ತಿದೆ.

ಆ) ಸಮುದ್ರ ಕೊರೆತವನ್ನು ತಡೆಗಟ್ಟಲು ಸರ್ಕಾರವು 1979-80ರಿಂದ ಸಮುದ್ರ ಕೊರೆತ ತಡೆಗೋಡೆಗಳನ್ನು ನಿರ್ಮಿಸಲಾಗುತ್ತಿದ್ದು, ಇದಕ್ಕಾಗಿರಾಜ್ಯ ಆಯವ್ಯಯದಲ್ಲಿ ಅನುದಾನವನ್ನು ಮೀಸಲಾಗಿಡಲಾಗುತ್ತದೆ. ಇದಲ್ಲದೆ, ಕರ್ನಾಟಕ ಕರಾವಳಿ ತೀರದ ಉತ್ತರ ಕನ್ನಡ ಮತ್ತು ದಕ್ಷಿಣ ಕನ್ನಡ ಜಿಲ್ಲೆಗೆ ಒಟ್ಟು 211.316 ಕಿ.ಮೀ. ಉದ್ದ ತಡೆಗೋಡೆಯನ್ನು ನಿರ್ಮಿಸಲು ಒಂದು ಸಮಗ್ರ ಯೋಜನೆಯನ್ನು 847.00 ಕೋಟಿ ರೂ.ಗಳಿಗೆ ತಯಾರಿಸಿ ಕೇಂದ್ರ ಸರ್ಕಾರದ ಅನುಮೋದನೆಗಾಗಿ ಸಲ್ಲಿಸಿದ್ದು, ಈ ಯೋಜನೆಯ ಬಗ್ಗೆ ಕೇಂದ್ರ ಸರ್ಕಾರವರು ಮಾಡಿರುವ ಕೆಲವೊಂದು ಆಕ್ಷೇಪಣೆಗಳಿಗೆ ಅನುಗುಣವಾಗಿ ಪುನಃ 572.161 ಕೋಟಿ ರೂ.ಗಳಿಗೆ ಯೋಜನೆ ಆ ತಯಾರಿಕೆಯ ಹಂತದಲ್ಲಿದೆ.

ಶ್ರೀ ವಸಂತ ವಿ. ಸಾಲಿಯಾನ : ಮಾನ್ಯ ಅಧ್ಯಕ್ಷರೇ, ಉತಕ್ತರದಲ್ಲಿಬಂದಂತೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 1995-96ನೇ ಸಾಲಿಗೆ 32643 ಮೀಟರ್ ಸಮುದ್ರ ಕೊರೆತ ಆಗಿದೆ. ಅದೇ ರೀತಿ 96-97ನೇ ಸಾಲಿಗೆ 3263 ಮೀಟರ್ ಸಮುದ್ರ ಕೊರೆತ ಆಗಿದೆ, ಅದೇ ರೀತಿ 96-97ನೇ ಸಾಲಿಗೆ 2372 ಮೀಟರ್ ಅಷ್ಟು ಸಮುದ್ರ ಕೊರೆತ ಆಗಿದೆ. ಈ ರೀತಿ ಸಮುದ್ರ ಕೊರೆತ ಆದಂಥ ಪ್ರದೇಶದಲ್ಲಿ ಹಲವಾರು ಮನೆಗಳು, ಕೃಷಿ ಭೂಮಿ ಮತ್ತು ಕೃಷಿ ಎಲ್ಲಾ ಕಳೆದುಕೊಂಡಿದ್ದಾರೆ. ಸಮುದ್ರ ತೀರದ ಭಾಗದ ಜನರು ಇದೆಲ್ಲಾ ಕಳೆದುಕೊಂಡಿದ್ದಾರೆ. ಇದರ ಬಗ್ಗೆ ತಾವು ತಮ್ಮ ಇಲಾಖೆಯಿಂದಾಲಾಗಲೀ, ಸರ್ಕಾರದಿಂದಾಗಲೀ, ದೊಡ್ಡ ದೊಡ್ಡ ಮನೆ ಕಳೆದು ಕೊಂಡವರಿಗೆ ಇಷ್ಟರತನಕ ಏನೂ ಪರಿಹಾರ ಸಿಗಲಿಲ್ಲ. ಅಪೇರೀತಿ ಕೃಷಿ ಭೂಮಿ ಕಳೆದುಕೊಂಡಿದ್ದಾರೆ. ಕೃಷಿ ಕೂಡ ಕಳೆದುಕೊಂಡಿದ್ದಾರೆ. ಒಂದು ತೆಂಗಿನ ಮರಕ್ಕೆ ತಾವು ನೂರು ರೂಪಾಯಿ ಎಂದು ಕೊಡುತ್ತಿದ್ದೀರಿ. ಯಾವುದೇ ರೀತಿಯಲ್ಲಿ ಸರಿಯಾಗಿ ಪರಿಹಾರವನ್ನು ಕೊಟ್ಟಿಲ್ಲ. ಎರಡನೆಯ ವಿಚಾರ ಎಂದರೆ 1979ರಿಂದ ಈ ತನಕ ಯಾವುದೇ ಸರ್ಕಾರ ಇರಬಹುದು. ಶಾಶ್ವತವಾದಂಥ ಕೇರಳ ಮಾದರಿಯ ರೀತಿಯಲ್ಲಿ ತಡೆಗೋಡೆ ನೀರ್ಮಾಣ ಮಾಡಲಿಕ್ಕೆ ಯಾವುದೇ ಒಂದು ಯೋಜನೆಯನ್ನು ತಯಾರಿಸಲಿಲ್ಲ. ತಾವು ಹೇಳುತ್ತಿದ್ದೀರಿ, ಯೋಜನೆಯನ್ನು ಕೇಂದ್ರಸರ್ಕಾರಕ್ಕೆ ಕಳುಹಿಸಿಕೊಟ್ಟಿದ್ದೇವೆ ಎಂದು. ಅದು ಯಾವ ಯೋಜನೆ? ಎಷ್ಟು ಕೋಟಿ ರೂಪಾಯಿಯ ಯೋಜನೆ? ಅದು ಯಾವಾಗ ರಾಜ್ಯಸರ್ಕಾರಕ್ಕೆ ಬರುತ್ತದೆ? ಮತ್ತು ಶಾಶ್ವತವಾದ ಕಾರ್ಯಕ್ರಮವನ್ನು ಯಾವಾಗ ಪ್ರಾರಂಭ ಮಾಡುತ್ತೀರಿ? ಏಕೆಂದರೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಉಳ್ಳಾಲದಿಂದ ಹಿಡಿದು ಬೈಂದೂರಿನವರೆಗೆಸಮುದ್ರ ತೀರದ ಭಾಗದಲ್ಲಿ ಅನೇಕ ಕಡೆಗಳಲ್ಲಿ ಬಹಳ ತೀವ್ರವಾದ ಸಮುದ್ರ ಕೊರೆತ ಈಗಲೂ ನಡೆಯುತ್ತಿದೆ, ಇವತ್ತು ನಡೆಯುತ್ತಿದೆ, ಆದ್ದರಿಂದ ಒಂದನೆಯದಾಗಿ ತುರ್ತು ಮಾಡುವ ಕಾರ್ಯಕ್ರಮ ಒಂದುಕಡೆ ಇರಲಿ. ಮತ್ತು ಶಾಶ್ವತವಾಗಿ ಮಾಡುವಂಥ ಕಾರ್ಯಕ್ರಮಗಳು, ಎರಡು ಕಾರ್ಯಕ್ರಮಗಳನ್ನು ತಾವು ಮಾಡಿಕೊಡಬೇಕು ಮತ್ತು ಕೇರಳ ಮಾದರಿಯ ಕಾರ್ಯಕ್ರಮವನ್ನು ಅದಷ್ಟು ಬೇಗ ಕೇಂದ್ರ ಸರ್ಕಾರದಿಂದ ತರಿಸಿ ಮಾಡುತ್ತೀರೋ?

ಶ್ರೀ ತಿಪ್ಪೇಸ್ವಾಮಿ : ಮಾನ್ಯ ಅಧ್ಯಕ್ಷರೇ, ನಾವು 21-9-1996 ರಂದು ಕೇರಳ ಮಾದರಿಯ ಒಂದು ಯೋಜನೆಯನ್ನು ರಚಿಸಿ ನೋಡಿ 84 ಕೋಟಿ ರೂಪಾಯಿಗಳ ಒಂದು ಯೋಜನೆಯನ್ನು ಭಾರತ ಸರ್ಕಾರಕ್ಕೆ ಕಳುಹಿಸಿದ್ದೇವೆ. ಭಾರತ ಸರ್ಕಾರದಿಂದ ಸಿ. ಡಬ್ಲೂ.ಸಿ. ಇವರು ನಮಗೆ ಅದನ್ನು ಮತ್ತೆ ವಾಪಸ್ ಕಳುಹಿಸಿದರು. ವಾಪಸ್ ಕಳುಹಿಸಿದ್ದು ಯಾವಾಗ ಎಂದರೆ 9-4-1997 ರಂದು ವಾಪಸ್‌ಬಂತು. ಅವರು ಹಾಕಿರುವ ಅಬ್ಜೆಕ್ಷನ್ ಏನೆಂದರೆ

ನೀವು ಕೇರಳ ಮಾದರಿಯಲ್ಲಿ ಮಾಡಬೇಡಿ, ಸಿಡಬ್ಲ್ಯೂಸಿ ಏನು ಸಲಹೆ ಕೊಟ್ಟಿದೆ ಆ ಒಂದು ಆಧಾರದ ಮೇಲೆ ಮಾಡಿ ಕಳುಹಿಸಿ ಎಂದು ಹೇಳಿದ್ದಾರೆ. ನಾವು ಅದರ ಪ್ರಕಾರ ಈಗ ಪುನಃ ಒಂದು ಯೋಜನೆಯನ್ನು ರೂಪಿಸಿದ್ದೇವೆ. 572.161 ಕೋಟಿ ರೂಪಾಯಿಗೆ ಯೋಜನೆಯನ್ನು ರೂಪಿಸಿ ಮತ್ತೆ ಈಗ ಅದನ್ನು ಕಳುಹಿಸಿಕೊಡುತ್ತೇವೆ. ಅದು ಬಂದ ತಕ್ಷಣ ಈ ಶಾಶ್ವತ ಪರಿಹಾರ ಕಾಮಗಾರಿಯನ್ನು ಸಮುದ್ರ ಕೊರೆತಕ್ಕೆ ರೂಪಿಸುತ್ತೇವೆ ಎಂದು ನಾನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಷ್ಟಪಡುತ್ತೇನೆ.

ಶ್ರೀ ವಸಂತ ವಿ. ಸಾಲಿಯಾನ : ಮಾನ್ಯ ಅಧ್ಯಕ್ಷರೇ, ಶಾಶ್ವತವಾದ ತಡೆಗೋಡೆಯ ಕಾರ್ಯಕ್ರಮ ಇವತ್ತಲ್ಲ, 1979 ನೇ ಇಸವಿಯಿಂದ ನಡೆಸಿಕೊಂಡು ಬಂದಿದ್ದೇವೆ. ಆದರೆ ಇವತ್ತಿನವರೆಗೆ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಾಗಲಿ ಅಥವಾ ಉತ್ತರ ಕನ್ನಡ ಜಿಲ್ಲೆಯಾಗಲಿ, ಅಥವಾ ಉತ್ತರ ಕನ್ನಡ ಜಿಲ್ಲೆಯಾಗಲಿ ಶಾಶ್ವತವಾದ ತೆಡೆಗೋಡೆಯ ಕಾರ್ಯಕ್ರಮ ಇವತ್ತಿನವರೆಗೆ ನಮಗೆ ಫಲಕಾರಿಯಾಗಲಿಲ್ಲ. ಇವತ್ತು ತಾವು ಕೊಟ್ಟರುವ ಉತ್ತರದಲ್ಲಿ ಎಷ್ಟೋ ಲಕ್ಷ ರೂಪಾಯಿ, ಎಷ್ಟೋ ಕೋಟಿ ರೂಪಾಯಿಗಳನ್ನು ಸಮುದ್ರ ಕೊರೆತಕ್ಕೆ ವೆಚ್ಚ ಮಾಡಿದ್ದೇವೆ. ಅಲ್ಲಲ್ಲಿ ತಡೆಗೋಡೆ ನಿರ್ಮಾಣ ಮಾಡಬಹುದು. ಆ ಕಲ್ಲು ಸಮುದ್ರಕ್ಕೆ ಹೋಗುವುದು. ಇಂಥ ಕಾಮಗಾರಿ ನಡೆಯುತ್ತಿದೆ. ನನ್ನ ಒಂದು ಉದ್ದೇಶ ಇಷ್ಟೆ, ನಮ್ಮೆಲ್ಲಾ ದಕ್ಷಿಣ ಕನ್ನಡ ಜಿಲ್ಲೆಯ ಅಥವಾ ಉತ್ತರ ಕನ್ನಡ ಜಿಲ್ಲೆಯ ಶಾಸಕರ ಪರವಾಗಿ ನಾನು ಮಾತನಾಡುತ್ತಿದ್ದೇನೆ. ಇದಕ್ಕೆ ಸರಿಯಾದಂಥ ಶಾಶ್ವತ ತಡೆಗೋಡೆ ಕಾರ್ಯಕ್ರಮ ಮಾಡಬೇಕಾಗುತ್ತದೆ. ಒಂದು ಕಡೆಯಿಂದ ಪ್ರಾರಂಭಮಾಡಿದರೆ ಯಾವ ರೀತಿ ನಡೆಯಬಹುದು ಎಂಬುದು ಗೊತ್ತಾಗುತ್ತದೆ. ಅದರಿಂದ ರಾಜ್ಯ ಸರ್ಕಾರದಿಂದ ಇದಕ್ಕೆಬೇಕಾದಂಥ ಬಜೆಟ್‌ನ್ನು ಪ್ರತಿವರ್ಷ ತಾವು ಇಟ್ಟುಕೊಂಡು ಬೇರೆ ಬೇರೆ ಕಡೆಯಲ್ಲಿ ಕಾಮಗಾರಿ ನಡೆಸಿದರೆ ಉತ್ತಮವಾಗುತ್ತದೆ ಎಂದು ನನ್ನ ಅನಿಸಿಕೆ.

ಶ್ರೀ ತಿಪ್ಪೇಸ್ವಾಮಿ : ಮಾನ್ಯ ಅಧ್ಯಕ್ಷರೇ, ನಮಗೆ ಕರ್ನಾಟಕದಲ್ಲಿ 300 ಕಿಲೋಮೀಟರ್‌ನಷ್ಟು ಸಮುದ್ರ ಕೊರೆತ ಉತ್ತರ ಕನ್ನಡ ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿದೆ ಇವತ್ತುನಾವು 1979ನೇ ಇಸವಿಯಲ್ಲಿ ಶುರುಮಾಡಿದಂಥ ಕಾಮಗಾರಿಯಿಂದ ನಾವು ಕೇವಲ ಎಷ್ಟು ಕಿಲೋಮೀಟರ್‌ಗಳನ್ನು ಕಟ್ಟಿದ್ದೇವೆ ಎಂದರೆ ಕೇವಲ 32 ಕಿಲೋಮೀಟರ್‌ಗಳನ್ನು ಮಾತ್ರ ಮಾಡುವುದಕ್ಕೆ ಸಾಧ್ಯವಾಗಿದೆ. ಅದು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 20 ಕಿಲೋಮೀಟರ್ ಮಾಡಿದ್ದೇವೆ. ಉತ್ತರ ಕನ್ನಡ ಜಿಲ್ಲೆಯಲ್ಲಿ ಬರೀ ಕೇವಲ 12 ಕಿಲೋಮೀಟರ್ ಮಾಡಿದ್ದೇವೆ. ಇನ್ನು 270 ಕಿಲೋಮೀಟರ್ ಉದ್ದಳತೆ ನಮ್ಮ ಸಮುದ್ರ ಕೊರೆತ ಇದೆ. ಇಷ್ಟಕ್ಕೆ ನಾವು ಹಣ ಖರ್ಚು ಮಾಡಬೇಕೆಂದರೆ ನಾವು ಒಂದು ಯೋಜನೆ ರೂಪಿಸಿ ಭಾರತ ಸರ್ಕಾರಕ್ಕೆ

ಕಳುಹಿಸಿದ್ದೇವೆ. ಅದು ಬಂದತಕ್ಷಣ ಆದಷ್ಟು ಬೇಗ ಈ ಕಾಮಗಾರಿಯನ್ನು ತ್ವರಿತವಾಗಿ ತೆಗೆದುಕೊಳ್ಳುತ್ತೇವೆ. ಮತ್ತೆ ನಾವು ಏನು ಮಾಡುತ್ತೇವೆ ಎಂದರೆ ಮಳೆಗಾಲದಲ್ಲಿ ಬಹಳ ತುರ್ತಾದಂಥ ಸಮುದ್ರ ಕೊರೆತ ಆಗಿ ದಡದಲ್ಲಿರುವ ತೆಂಗಿನ ತೋಟಗಳು ಹಾಳಾಗಿ ಮತ್ತು ಮೀನು ಹಿಡಿಯುವರರೆಗೆ ಬಹಳ ತೊಂದರೆಯಾಗಿರುವ ಉದಾಹರಣೆಗಳು ಕೂಡ ಇವೆ.

12-10 ಪಿ.ಎಂ.

ಅಂತಹ ಸಂದರ್ಭದಲ್ಲಿ ನಾವು ತುರ್ತು ಕಾಮಗಾರಿ ಎಂದು ಹೇಳಿ ಒಂದಿಷ್ಟು ಕಲ್ಲುಗಳನ್ನು ಅಲ್ಲಿಗೆ ಹಾಕುತ್ತೇವೆ. ಅಂತಹ ಕಲ್ಲುಗಳನ್ನು ಹಾಕಿದಂತಹ ಸಂದರ್ಭದಲ್ಲಿ ಅವುಗಳಲ್ಲಿ ಕೆಲವು ಸಮುದ್ರಕ್ಕೆ ಹೋಗುತ್ತವೆ. ಕೆಲವು ಇದ್ದಾವೆ. ಇಂತಹ ಒಂದು ಕಾಮಗಾರಿಯನ್ನು ಮಾಡುವ ಬಗ್ಗೆ ಯೋಜನೆಯನ್ನು ತಯಾರು ಮಾಡಿ ಭಾರತ ಸರ್ಕಾರಕ್ಕೆ ಕಳುಹಿಸಿದ್ದೇವೆ. ಅಲ್ಲಿಂದ ಹಣ ಬಂದ ತಕ್ಷಣ ಶಾಶ್ವತವಾದಂತಹ ಒಂದು ಉತ್ತಮವಾದ ಕೆಲಸ ಮಾಡುವುದಕ್ಕೆ ನಾವು ಪ್ರಾಮಾಣಿಕವಾಗಿ ಪ್ರಯತ್ನ ಮಾಡಿಸುವುದಕ್ಕೆ ವ್ಯವಸ್ಥೆ ಮಾಡುತ್ತೇವೆ.

ಶ್ರೀ ಐ. ಎಂ. ಜಯರಾಮಶೆಟ್ಟಿ : ಮಾನ್ಯ ಮಂತ್ರಿಗಳು 1995-96ನೇ ಸಾಲಿಗೆ 847 ಕೋಟಿ. ರೂಗಳ ಕಾಮಗಾರಿಗಳ ಪಟ್ಟಿಯನ್ನು ಮಾಡಿ ಕೇಂದ್ರಕ್ಕೆ ಕಳುಹಿಸುತ್ತೇವೆ ಎಂದು ಹೇಳಿದ್ದರು. ಪುನಃ ಬದಲಾವಣೆ ಮಾಡಿ 522 ಕೋಟಿ ರೂಪಾಯಿಗೆ ಕೇಂದ್ರ ಸರ್ಕಾರಕ್ಕೆ ಕಳುಹಿಸುತ್ತೇವೆಂದು ಹೇಳಿದ್ದಾರೆ. ಮಾನ್ಯ ಮಂತ್ರಿಗಳು ನಮ್ಮ ಜಿಲ್ಲೆಯ ಒಂದು ಪತ್ರಿಕೆಯಲ್ಲಿ ಹೇಳಿರುವ ಒಂದು ಹೇಳಿಕೆ ಇದೆ. 1400 ಕೋಟಿ ರೂಪಾಯಿಯ ಒಂದು ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿದ್ದೇನೆಂದು ಹೇಳಿದರು. ಮಾನ್ಯ ಮೀನುಗಾರಿಕಾ ಸಚಿವರು ಶಾಶ್ವತ ತಡೆಗೋಡೆ ತರುವುದಕ್ಕೆ ಕೊಟ್ಟಂತಹ ಹೇಳಿಕೆಯ ನೆನಪು ನನಗೆ ಇದೆ. ಇದರಲ್ಲಿ ಯಾವುದು ಸರಿ ಯಾವುದು ತಪ್ಪು ಎಂದು ಹೇಳಬೇಕು. ಎರಡನೆಯದಾಗಿ ಉಳ್ಳಾಲದಲ್ಲಿ ತಡೆಗೋಡೆ ಕಾಮಗಾರಿ ಆಗಿದೆ. ಅಲ್ಲಿ ಮನೆಗಳನ್ನು ಕಳೆದುಕೊಂಡಂತಹವರಿಗೆ ತಾವು ಏನು ವ್ಯವಸ್ತೆ ಮಾಡಿಕೊಟ್ಟಿದ್ದೀರಿ? ಕಳೆದ ಎರಡು ಮೂರು ವರ್ಷಗಳಿಂದ ಅಲ್ಲಿ ಕೆಲಸ ಆಗುತ್ತಾ ಉಂಟು. ಕಳಪೆ ಕಾಮಗಾರಿ ಆಗಿದೆ. ತಮ್ಮಲ್ಲಿಂದ ಪೇಮೆಂಟ್ ಆಗಿರಲಿಲ್ಲ. ಅವರಿಗೆತಾವು ಪೇಮೆಂಟ್ ಮಾಡಿದ್ದೀರಾ ಮತ್ತು ನಿಮ್ಮ ಕಳೆದ ವರ್ಷದ ಬಜೆಟ್‌ನಲ್ಲಿ 1.5 ಕೋಟಿ ರೂಪಾಯಿ ದಕ್ಷಿಣ ಕನ್ನಡ ಜಿಲ್ಲೆಗೆ ಮೀಸಲಾಗಿಟ್ಟಿದ್ದೀರಿ. ಆದರ ಈಗ ದುರುದ್ದೇಶದಿಂದ ಅದನ್ನು ಉತ್ತರ ಕನ್ನಡ ಜಿಲ್ಲೆಗೆ ಕಳುಹಿಸಿಕೊಟ್ಟಿದ್ದೀರಿ. ಅಲ್ಲಿ ಒಂದು ನಯಾ ಪೈಸೆ ಖರ್ಚು ಮಾಡಿಲ್ಲ. ಆದ್ದರಿಂದ ತಾವು ಕಾಮಗಾರಿಯನ್ನು ಯಾವಾಗ ಮಾಡುತ್ತೀರಿ? ನೀವು ಇದರ ಬಗ್ಗೆ ಪೂರ್ಣ ಭರವಸೆ ಕೊಡುತ್ತಿರಾ ಎಂದು ಕೇಳುತ್ತಿದ್ದೇನೆ.

ಶ್ರೀ ತಿಪ್ಪೇಸ್ವಾಮಿ : ಯಾವ್ಯಾವ ಕಾಮಗಾರಿಗಳ ವರದಿಬೇಕು ಎಂದು ಹೇಳಿದರೆ ಅದನ್ನು ನಾನು ಅವರಿಗೆ ಕಳುಹಿಸಿಕೊಡುತ್ತೇನೆ. ಕಳಪೆ ಕಾಮಗಾರಿ ಎಂದು ಏನಾದರೂ ಆಗಿದ್ದರೆ ಹೇಳಲಿ. ನಾನು ಮೊನ್ನೆ ತಾನೇ ಸಾಕಷ್ಟು ಸ್ಥಳಗಳ ಸಂದರ್ಶನವನ್ನು ಮಾಡಿ ಬಂದಿದ್ದೇನೆ. ಅಂಥಹದ್ದು ಏನಾದರೂ ಆಗಿದ್ದರೂ ನನ್ನ ಗಮನಕ್ಕೆ ತರಲಿ. ಮಾನ್ಯ ಸದಸ್ಯರಿಗೆ ಅಂಥಹದು ಗೊತ್ತಿದ್ದರೆ ನನ್ನ ಗಮನಕ್ಕೆ ತರಲಿ. ನನ್ನ ಗಮನಕ್ಕೆ ತರಲಿ. ನನ್ನ ಗಮನಕ್ಕೆ ಯಾವುದೂ ಗೊತ್ತಿಲ್ಲ. ಅಂಥಹದು ಏನಾದರೂ ಆಗಿದ್ದರೆ ಶಿಸ್ತಿನ ಕ್ರಮವನ್ನು ತೆಗೆದುಕೊಳ್ಳುತ್ತೇನೆ.

ಶ್ರೀ ಐ. ಎಂ. ಜಯರಾಮ ಶೆಟ್ಟಿ : ಉಳ್ಳಾಲದಲ್ಲಿ ಕಳಪೆ ಕಾಮಗಾರಿ ಆಗಿದೆ. ಕಳಿದ ವರ್ಷ ಒಂದು ಕಲ್ಲು ಹಾಕಲಾಗಿದೆ. ಒಂದು ಮಗುವಿನ ಮೇಲೆ ಕಲ್ಲು ಬಿದ್ದು ಸತ್ತು ಹೋಗಿದೆ. ಕಾಮಗಾರಿ ಆಗಿಲ್ಲ. ಗುತ್ತಿಗೆದಾರರನ್ನು ಅಲ್ಲಿ ಕೇಳಿದಾಗ ಸರ್ಕಾರದಿಂದ ಹಣ ಪಾವತಿ ಆಗಿಲ್ಲ ಎಂದು ಹೇಳಿದ್ದಾರೆ. ಈಗ ಪುನಃ ಕಲ್ಲು ಹಾಕುತ್ತಿದ್ದಾರೆ. ಎರಡು ತರಹದ ಕಾಮಗಾರಿಗಳು. ಯಾವ ಲೆಕ್ಕಾಚಾರದಲ್ಲಿ ಆಗುತ್ತಿದೆ? ಈ ವರ್ಷದ ಬಜೆಟ್‌ನಲ್ಲಿ ಕಾಮಗಾರಿಗೆ ಎಷ್ಟು ಹಣ ಮೀಸಲಾಗಿಟ್ಟಿದ್ದೀರಿ? ಕಳಿದ ವರ್ಷ ಎಷ್ಟು ಇತ್ತು ? ಕಳಿದ ವರ್ಷದ ಬಜೆಟ್ ಎಷ್ಟು ಈ ವರ್ಷದ ಬಜೆಟ್ ರಾಜ್ಯ ಸರ್ಕಾರದ್ದು ಎಷ್ಟು ಎಂದು ಹೇಳಿ.

ಶ್ರೀ ತಿಪ್ಪೇಸ್ವಾಮಿ : ನಾವು ಈ ವರ್ಷ ಕೋಟಿ ರೂಪಾಯಿಗಳ ಪ್ರಾವಿಷನ್ ಮಾಡಿಕೊಂಡಿದ್ದೇವೆ. ಅಷ್ಟೂ ಹಣ ಖರ್ಚು ಮಾಡಬಹುದು. ಈಗ ಮಾನ್ಯ ಸದಸ್ಯರು ಏನು ಹೇಳಿದ್ದಾರೆ, ಕಳಪೆ ಕಾಮಗಾರಿ ಆಗಿದೆ ಎಂದು, ವರದಿಯನ್ನು ತರಿಸಿಕೊಂಡು ಅಂತಹದ್ದು ಏನಾದರೂ ಕಳಪೆ ಕಾಮಗಾರಿ ಆಗಿದ್ದರೆ ಶಿಸ್ತಿನ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಐ. ಎಂ. ಜಯರಾಮ ಶೆಟ್ಟಿ : ತಾವು ಮೀನುಗಾರರ ಬಗ್ಗೆ ವ್ಯವಸ್ಥಿತವಾಗಿ ಗಂಭೀರವಾಗಿ ತೆಗೆದುಕೊಳ್ಳುತ್ತಿಲ್ಲ. ಕಳಿದ ವರ್ಷ ಹತ್ತು ಕೋಟಿ ರೂಪಾಯಿ ಇಟ್ಟಿದ್ದೀರಿ, ಈ ವರ್ಷ ಎರಡು ಕೋಟಿ ರೂಪಾಯಿ ಕಡಿಮೆ ಮಾಡಿದ್ದೀರಿ. ಕಳಿದ ಹತ್ತು ಹದಿನೈದು ವರ್ಷಗಳಿಂದ ನಿರಂತರ ಸಮುದ್ರ ಕೊರೆತ ಆಗುತ್ತಾ ಉಂಟು. ಆದ್ದರಿಂದ ರಾಜ್ಯ ಸರ್ಕಾರ ಇದರ ಬಗ್ಗೆ ನಿಗಾ ತೆಗೆದುಕೊಳ್ಳುತ್ತಾ ಇಲ್ಲ. ಕಾರವಾರದ ಜನರ ಬಗ್ಗೆ ಕರಾವಳಿ ಜನರ ಬಗ್ಗೆ ನಿಗಾ ತೆಗೆದುಕೊಳ್ಳುತ್ತಾ ಇಲ್ಲ. ನೀವು ಇದಕ್ಕೆ ಜಾಸ್ತಿ ಹಣ ಇಡಬೇಕಾಗಿತ್ತು. ಅದಕ್ಕೆ ನಾನು ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ತಾವು ಮೀನುಗಾರರ ಬಗ್ಗೆ ತಮ್ಮ ಇಲಾಖೆಗೆ ಸೇರಿದ ಹಾಗೆ ತಾವು ಒಂದು ಶಾಸ್ವತವಾದ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕು. ಅತೀ ವೇಗದಲ್ಲಿ ಕೆಲಸ ಆಗಬೇಕು. ಈಗಿರುವ ತರಹ ಆದರೆ ಇನ್ನೂ 25 ವರ್ಷ ಆದರೂ ಸಾಧನೆ ಆಗಲಿಕ್ಕಿಲ್ಲ.

ಅಧ್ಯಕ್ಷರು : ಮಾನ್ಯ ಜಯರಾಮ ಶೆಟ್ಟಿಯವರೇ ಇವರು ಚಿತ್ರದುರ್ಗ ಜಿಲ್ಲೆಯವರು. ತುಮಕೂರು, ಕೋಲಾರ ಇವೆಲ್ಲಾ ಬರಗಾಲ ಪ್ರದೇಶಗಳು. ಸಮುದ್ರದ ವಿಚಾರದಲ್ಲಿ ಅವರಿಗೆ ಗೊತ್ತಿರಲಿಲ್ಲ. ಈಗ ತಾವು ತಿಳುವಳಿಕೆ ಕೊಟ್ಟಿದ್ದೀರಿ. ಅವರು ಸಮಯ ತೆಗೆದುಕೊಂಡು ಅಧ್ಯಯನ ಮಾಡಿ ಕಡಿಮೆ ಬಿದ್ದ ಆ ಎಲ್ಲಾ ದುಡ್ಡನ್ನೂ ತುಂಬಿ ಕೊಡುವುದಕ್ಕೆ ಪ್ರಯತ್ನ ಮಾಡುತ್ತಾರೆ.

ಶ್ರೀ ಐ. ಎಂ. ಜಯರಾಮಶೆಟ್ಟಿ : ಮೀನುಗಾರಿಕಾ ಮಂತ್ರಿಗಳೂ ನಮ್ಮ ಜಿಲ್ಲೆಯವರಿದ್ದಾರೆ. ಇದರ ಬಗ್ಗೆ ಅವರು ಏನು ಹೇಳುತ್ತಾರೆ? ಬಂದ ಆದಾಯವನ್ನು ಏನು ಮಾಡುತ್ತಿದ್ದಾರೆ. ಸುಮಾರು 700 ಕೋಟಿ ರೂಪಾಯಿ ಆದಾಯ ಬರುತ್ತಿದೆ.

ಅಧ್ಯಕ್ಷರು : ನೀವು ನಾನು ಕೇಳುವುದನ್ನು ಅರ್ಥ ಮಾಡಿಕೊಳ್ಳಬೇಕು. ಬರೇ ಸೀರಿಯಸ್ಸಾಗಿಬಾರದು. ಈಗ ಅವರು ಸಮಯ ತೆಗೆದುಕೊಂಡಿದ್ದಾರೆ. ಅಧ್ಯಯನ ಮಾಡಿ ಸಮುದ್ರದ ಕೊರೆತ ಇರದಂತೆ ನಿಮ್ಮ ಕಿರುಕುಳ ಇಲ್ಲಿ ಇರದಂತೆ ಅವಕಾಶ ಮಾಡಿಕೊಡುವ ಪ್ರಯತ್ನ ಮಾಡುತ್ತಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನ್ಯಾಚುರಲ್‌ಕೆಲಾಮಿಟೀಸ್ ಫಂಡ್‌ನಲ್ಲಿ ಅದನ್ನು ಮಾಡಬೇಕು. ಉಸ್ತುವಾರಿ ಸಚಿವರಾದಂತಹ ಮಾನ್ಯ ಮೊಯಿದ್ದೀನ್ ಅವರೂ ಸಹ ಆ ಸ್ಥಳಕ್ಕೆ ಭೇಟಿ ಕೊಟ್ಟಿದ್ದಾರೆ. ಎಲ್ಲಾ ಕಡೆ ಅಡ್ಡಾಡಿದ್ದಾರೆ. ಆ ಎರಡು ಕೋಟಿ 45 ಲಕ್ಷ ರೂಪಾಯಿಗಳನ್ನಾದರೂ ಕೂಡ ಈ ನ್ಯಾಚುರಲ್ ಕೆಲಾಮೀಟೀಸ್ ಫಂಡಿನಿಂದ ರಿಲೀಸ್ ಮಾಡಿಸಿ ಎಲ್ಲೆಲ್ಲಿ ಎಮರ್ಜೆನ್ಸಿ ವರ್ಕ್ ಇದೆ, ಆ ಕೆಲಸ ಆದರೂ ತೆಗೆದುಕೊಂಡರೆ ಅವರುಗಳಿಗೆ ಅನುಕೂಲ ಆಗುತ್ತದೆ. ಇಲ್ಲ ಎಂದರೆ ಇವರ ಇಲಾಖೆಯಿಂದ ಒಂದು ಪೈಸೆಯನ್ನು ಬಿಡುಗಡೆ ಮಾಡಿಲ್ಲ. ಇಲ್ಲಿಯವರೆಗೆ ಮೈನರ್ ಇರಿಗೇಷನ್ ಡಿಪಾರ್ಟ್‌ಮೆಂಟಿನಿಂದ ಹತ್ತು ಪೈಸೆ ಕೂಡ ರಿಲೀಸ್ ಮಾಡಿಲ್ಲ. ಅವರು ಬೇಕಾದರೆ ಹೇಳಲಿ ಮಾಡಿದ್ದಾರೆಂದು ಬಜೆಟ್‌ಡ್ ವರ್ಕ್ ಏನು ಇದೆ, ಆ ಬಜೆಟ್‌ಡೆ ವರ್ಕ್‌ಗೆ ಕೂಡ ಎಲ್‌ಓಸಿ ಬಿಡುಗಡೆ ಮಾಡಿಲ್ಲ. ಅದಕ್ಕೆ ತಾವು ಅದನ್ನು ಹೇಳಿ. ಶಾಶ್ವತವಾದಂತಹ ಪರಿಹಾರ 250 ಕಿಲೋ ಮೀಟರ್ ತಯಾರು ಮಾಡುವುದು, ನಬಾರ್ಡ್‌ನಲ್ಲಿ ಲೋನ್ ಅಪ್ಲಿಕೇಷನ್ ಹಾಕುವುದು, ಅದು ಸುಮಾರು ಸುಮಾರು ಎರಡು ವರ್ಷ ಅಥವಾ ಮೂರು ವರ್ಷ ಬೇಕು ಅದು ಅಪ್ರೋವ್ ಆಗುವುದಕ್ಕೆ ಈಗ ಎಮರ್ಜೆನ್ಸಿಯಲ್ಲಿ ಏನು ಕೆಲಸ ಮಾಡುತ್ತೀರಿ? ಆ ಹಣ ಏಕೆ ಬಿಡುಗಡೆ ಮಾಡಿಲ್ಲ? ಸುಮಾರು 33 ಕೋಟಿ ರೂಪಾಯಿ ಹಣ ಇದ್ದರೂ ಕೂಡ ಅದರಲ್ಲಿ ಒಂದೆರಡು ಕೋಟಿ ರೂಪಾಯಿಗಳನ್ನಾದರೂ ಖರ್ಚು ಮಾಡುವುದಕ್ಕೆ ಏಕೆ ಸಾಧ್ಯವಿಲ್ಲ?

ಶ್ರೀ ತಿಪ್ಪೇಸ್ವಾಮಿ : ಈಗ ನಾವು ಎಮರ್ಜೆನ್ಸಿಯಾಗಿ ಎಲ್ಲೆಲ್ಲಿ ಸಮುದ್ರ ಕೊರೆತೆ ಶುರು ಆಗಿತ್ತೋ ಅದಕ್ಕೆ ನಾನೇ ಖುದ್ದಾಗಿ ಹೋಗಿ ನೋಡಿಕೊಂಡು ಬಂದಿದ್ದೇನೆ. ಅಧಿಕಾರಿಗಳು ಈಗಾಗಲೇಅಲ್ಲಿ ಕಾಮಗಾರಿಗಳನ್ನು ಸಹ ಶುರು ಮಾಡಿದ್ದಾರೆ.

ಅರ್ಜೆಂಟಾಗಿ ಕೆಲವು ಕಡೆಗಳಲ್ಲಿ ಕಲ್ಲು ಹಾಕಿದ್ದೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಡೆಪ್ಯುಟಿ ಕಮೀಷನರ್ ಅವರು ಅಪ್ರೂವ್ ಕೊಟ್ಟಿಲ್ಲ. ಇದರು ಕೊಟ್ಟರಬೇಕು. ಆದರೆ ಅವರು ಹೇಳಿದರು ಎಲ್ಲಿಯವರೆಗೆ ಡೆಪ್ಯುಟಿ ಕಮೀಷನರ್ ಅವರಿಂದ ಇನ್‌ಸ್ಟ್ರಕ್ಷನ್ಸ್ ಬರುವುದಿಲ್ಲ, ದುಡ್ಡು ಬಿಡುಗಡೆ ಆಗುವುದಿಲ್ಲ. ನಾವು ಕೆಲಸ ಮಾಡಿದರೆ ನಾಳೆ ಮಂತ್ರಿಗಳೇ ನಮಗೆ ಹಿಡಿಯುತ್ತಾರೆ, ನೀವು ಯಾವ ಆಧಾರದಲ್ಲಿ ಮಾಡಿದ್ದೀರಿ ಎಂದು

ಶ್ರೀ ತಿಪ್ಪೇಸ್ವಾಮಿ : ಸಮುದ್ರ ಕೊರೆತದಿಂದ, ಈಗೇನು ನಮ್ಮ ರಾಜ್ಯದಲ್ಲಿ ಮಳೆ ಬಂದು ಎಲ್ಲೆಲ್ಲಿ ಅನಾಹುತ ಆಗಿದೆಯೋ, ಆ ಒಂದು ಕೆಲಸಗಳಿಗೆ ರಾಜ್ಯ ಸರ್ಕಾರ ಈಗಾಲೇ ಐದು ಕೋಟಿ ರೂಪಾಯಿ ರಿಲೀಸ್ ಮಾಡಿದೆ. ಈಗ ನಮ್ಮ ಮೈನರ್ ಇರಿಗೇಷನ್ ವತಿಯಿಂದ ನಾವು ಸಮುದ್ರ ಕೊರೆತದಲ್ಲಿ ಶುರು ಮಾಡಿರುವಂತಹ ಕೆಲಸಕ್ಕೆ ಬಜೆಟ್‌ನಲ್ಲಿರತಕ್ಕಂಥ ಹಣವನ್ನೇ ಕೊಡುತ್ತಿದ್ದೇವೆ. ಈಗಾಗಲೇ ಕೆಲಸವನ್ನು ಶುರು ಮಾಡಿದ್ದೇವೆ, ಅವರಿಗೆ ಹಣವನ್ನು ಕೊಡುತ್ತೇವೆ.

ಶ್ರೀ ಕಾಗೋಡು ತಿಮ್ಮಪ್ಪ : ಡಿಸಿ ಅಪ್ರೂವಲ್ ಇಲ್ಲದೇ ಹಣ ಹೇಗೆ ಬಿಡುಗಡೆ ಆಗುತ್ತದೆ?

ಶ್ರೀ ತಿಪ್ಪೇಸ್ವಾಮಿ : ಡಿಸಿಗೂ ನಮಗೂ ಸಂಬಂಧ ಇಲ್ಲ. ನಮ್ಮ ಹಣವನ್ನು ನಾವು ಕೊಡುತ್ತೇವೆ.

ಶ್ರೀ ಎಂ. ವೀರಪ್ಪ ಮೊಯಿಲಿ : ತಾವು ಮಾತನಾಡುತ್ತಾ ಇಲ್ಲೊಂದು ವಿಚಾರ ಹೇಳುತ್ತೀರಿ. ಮತ್ತೆ ಅಲ್ಲಿ ವಾಸ್ತವಾಗಿರತಕ್ಕ ಪರಿಸ್ಥಿತಿಯೇ ಬೇರೆ. ಏಕೆಂದು ಹೇಳಿದರೆ ಅಲ್ಲಿ ಏನು ಬಜೆಟ್ ವರ್ಕ್ ಎಂದು ಇದೆ, ಕಮಿಟೆಡ್ ವರ್ಕ್. ಈ ಸೀ ಎರೋಷನ್‌ಗೆ ಸಂಬಂಧಪಟ್ಟಂತಹ ವರ್ಕ್ ಇದ್ದರೂ ಅವೆಲ್ಲಾ ಬಜೆಟೆಡ್ ಕಮಿಟೆಡ್ ವರ್ಕ್. ಈ ಸೀ ಎರೋಷನ್‌ಗೆ ಸಂಬಂಧಪಟ್ಟಂತಹ ವರ್ಕ್ ಇದ್ದರೂ ಅವೆಲ್ಲಾ ಬಜೆಟೆಡ್ ವರ್ಕ್. ಅದು ಸುಮಾರು ಮೂರು ಕೋಟಿ 69 ಲಕ್ಷ ಬಜೆಟ್‌ನಲ್ಲಿ ಇಂತಹ ವರ್ಕ್ಸ್‌ಗೇ ಕೊಡಬೇಕು ಎಂದುಹೇಳಿ ಇದೆ. ಅದು ಯಾವುದೂ ಈ ಬಜೆಟ್‌ನಲ್ಲಿ ಕವರ್ ಆಗಿಲ್ಲ. ಅದು

ಪ್ರತ್ಯೇಕ ಜಿಲ್ಲಾಧಿಕಾರಿಗಳ ಹತ್ತಿರ ಹೋದರೆ ಅವರೇನು ಹೇಳುತ್ತಾರೆ ಎಂದರೆ ಇದಕ್ಕೆ ಒಂದು ಪೈಸೆ ಕೂಡ ಕೊಡುವುದಕ್ಕೆ ಆಗುವುದಿಲ್ಲ ಎಮರ್ಜೆನ್ಸಿ ಫಂಡ್‌ನಿಂದ ಅಂದು ಹೇಳಿದ್ದಾರೆ. ಆದರೆ 53 ಎಟಂಗಳನ್ನು ನೀವು ಏನಲ್ಯಾ ಕಲ್ ಮಾಡಿದ್ದೀರಿ ಅದಕ್ಕೆ ಒಂದು ನಯಾ ಪೈಸೆ ಕೂಡ ಇಷ್ಟು ದಿವಸ ಆದರೂ ಬಿಡುಗಡೆ ಆಗಿಲ್ಲ. ಕಂಟ್ರಾಕ್ಟರ್‌ಗಳು 53 ವರ್ಕ್‌ಗಳನ್ನು ಪ್ರಾರಂಭ ಮಾಡಿದ್ದಾರೆ. ಆದರೆ ಯಾರೂ ಮಂಜೂರು ಆಗಲಿಲ್ಲ, ಎಂದು ನಯಾ ಪೈಸೆ ಅಲ್ಲಿ ಆಗಲಿಲ್ಲ. ಇವತ್ತು ನಾನು ಲೇಟೆಸ್ಟ್ ಇನ್‌ಫರ್ಮೇಷನ್ ಹೇಳುತ್ತಿದ್ದೇನೆ. ಆಸರ್ಟೈನ್ ಮಾಡಿಕೊಳ್ಳದೇ ನಾವು ಹೇಳುವುದಿಲ್ಲ. ಜವಾಬ್ದಾರಿಯಿಂದ ಹೇಳುತ್ತಿದ್ದೇವೆ. ಬಜೆಟೆಡ್ ವರ್ಕ್ ಏನು ಇದೆ, ಮೂರು ಕೋಟಿ 39 ಲಕ್ಷ ಅದು ಟೈಡ್ ಆಫ್ ವರ್ಕ್. 53 ಕಡೆ ಎಂದು ಹೇಳಿ ತಾವೇನು ಎಮರ್ಜೆನ್ಸಿ ವರ್ಕ್ ಎಂದು ಟ್ಯಾಕಲ್ ಮಾಡುತ್ತಿದ್ದೀರಿ, ಅದಕ್ಕೆಒಂದು ನಯಾ ಪೈಸ್ ಕೂಡ ಕೊಡುವುದಕ್ಕೆ ಆಗುವುದಿಲ್ಲ. ಎಮರ್ಜೆನ್ಸಿ ಬೇಸಿಸ್‌ನಲ್ಲಿ ಸೀ ಎರೋಷನ್‌ಗೆ ಕೊಡಬೇಕು, ಆದರಿಂದ ಮಾಡಬೇಕಾಗುತ್ತದೆ. ಕಡಿಮೆ ಪಕ್ಷ ನೀವು ಎರಡು ಕೋಟಿ ರೂಪಾಯಿ ಸೀ ಎರೋಷನ್ ಎಮರ್ಜೆನಿಕ ವರ್ಕ್‌ಗೆ ಎಂದು 53 ಕಡೆಕಗಳಲ್ಲಿ ಟ್ಯಾಕಲ್ ಮಾಡಿದ್ದೀರಿ, ಹಣ ಬಿಡುಗಡೆ ಮಾಡದಿದ್ದರೆ ಯಾವ ಕೆಲಸವೂ ಆಗುವುದಿಲ್ಲ. ದಯಮಾಡಿ ತಾವು ಇದರ ಬಗ್ಗೆ ಗಂಭೀರವಾಗಿ ಯೋಚನೆ ಮಾಡಬೇಕು.

ಶ್ರೀ ಜೆ. ಎಚ್. ಪಟೇಲ್ : ಡೆಪ್ಯುಟಿ ಕಮೀಷನರ್ ಪ್ರಶ್ನೆ ಯಾವಾಗ ಬರುತ್ತದೆ? ಅಂದರೆ ರೆವಿನ್ಯೂ ಡಿಪಾರ್ಟ್‌ಮೆಂಟ್‌ನಿಂದ ಸಾಮಾನ್ಯವಾಗಿ ಬರ ಪರಿಹಾರ. ಮತ್ತೊಂದು ವಿಚಾರ ಪ್ರವಾಹ, ಕೆಲಾಮಿಟೀಸ್ ಇದ್ದಾಗ ಡಿಸಿವಿಚಾರ ಬರುತ್ತದೆ. ಅವರ ರೆಕಮಂಡೇಷನ್ ಅಥವಾ ಅವರಿಗೆ ನಾವು ದುಡ್ಡು ಕೊಡುವುದು. ಇದುನೇರವಾಗಿ ಮೈನರ್ ಇರಿಗೇಷನ್‌ನಿಂದಲೇ ಇವರುಕೆಲಸ ಮಾಡಿಸುತ್ತಿರುವುದರಿಂದ ಡೆಪ್ಯುಟಿ ಕಮೀಷನರ್‌ಗೆ ವಿಚಾರ ಬರುವುದಿಲ್ಲ.

ಶ್ರೀ ಯು. ಆರ್. ಸಭಾಪತಿ : ಇದು ಪ್ರಕೃತಿ ವಿಕೋಪದ ವಿಚಾರ. ಪ್ರಕೃತಿ ವಿಕೋಪದ ಫಂಡ್‌ನಿಂದ ಕೊಡುವಂತಹದು. ಇಷ್ಟು ವರ್ಷದಿಂದ ಅವರು ಮಾಡುತ್ತಿದ್ದರು.

ಶ್ರೀ ಜೆ. ಎಚ್. ಪಟೇಲ್ : ಯಾವ ಇಲಾಖೆಯಾದರೂ ಆಗಲಿ, ಯಾರ ಮೂಲಕವಾದರೂ ಕೆಲಸ ಮಾಡುತ್ತಿದ್ದೇವಲ್ಲಾ.

ಶ್ರೀ ಎಂ. ವೀರಪ್ಪ ಮೊಯಿಲಿ : ನಾನು ನಿಮ್ಮ ಉದ್ದೇಶವನ್ನು ಪ್ರಶ್ನೆ ಮಾಡುತ್ತಿಲ್ಲ. ವಾಸ್ತವಿಕ ಸ್ಥಿತಿ ಏನು ಎಂದರೆ ಇಂತಹ ಎಮರ್ಜೆನ್ಸಿ ವಿಚಾರದಲ್ಲಿ ಪ್ರಕೃತಿ ವಿಕೋಪದಿಂದ ಆದಂತಹ ಎಮರ್ಜೆನ್ಸಿ ವರ್ಕ್ ಅದು ಮೈನರ್ ಇರಿಗೇಷನ್ ಇರಬಹುದು,

ಲೋಕೋಪಯೋಗಿ ಇಲಾಖೆ ಇರಬಹುದು, ಜಿಲ್ಲಾ ಪಂಚಾಯತಿ ಇರಬಹುದು ಅಥವಾ ಯಾವುದೇ ಇರಬಹುದು. ಆ ವರ್ಕ್ ಟ್ಯಾಕಲ್ ಮಾಡಲಿಕ್ಕೆ ಯಾವಾಗಲೂ ಪ್ರಕೃತಿ ವಿಕೋಪದ ಫಂಡ್‌ನಿಂದಲೇ ಹಣ ಬಿಡುಗಡೆ ಮಾಡತಕ್ಕದ್ದು. ನೀವು ಅವರಿಂದಲೇ ಮಾಡಿ ಅಥವಾ ತಾವು ನೇರವಾಗಿ ಇಲ್ಲಿ ಪ್ರಕೃತಿ ವಿಕೋಪದ ನಿಧಿಯಿಂದ ಬೇಕಾದರೆ ಮೈನರ್ ಇರಿಗೇಷನ್‌ಗೆ ಕೊಡಬಹುದು. ನಮಗೆ ಅದು ಬೇಕಾಗಿಲ್ಲ. ಆದರೆ ಹಿಂದಿನಿಂದಲೂ ನಡೆದುಕೊಂಡು ಬಂದಂತಹ ಪದ್ಧತಿ. ನೀವು ಆ ಪದ್ಧತಿಯನ್ನು ಬದಲಾವಣೆ ಮಾಡಿದರೆ ನಮ್ಮದೇನೂ ಅಡ್ಡಿ ಇಲ್ಲ. ಆದರೆ ಕಡಿಮೆ ಪಕ್ಷ ನೇರವಾಗಿ 53 ವರ್ಕ್ಸ್ ಏನು ಎಮರ್ಜೆನ್ಸಿ ಚೀಸ್‌ವರ್ಕ್ಸ್ ತೆಗೆದುಕೊಂಡಿದ್ದಾರೆ, ಮೈನರ್ ಇರಿಗೇಷನ್‌ಗೆ ತಾವು ಫೈನಾನ್ಸ್ ಡಿಪಾರ್ಟ್‌ಮೆಂಟಿನಿಂದ ಬಿಡುಗಡೆ ಮಾಡಿ ಕೆಲಸ ಮಾಡಿದರೆ ನಮಗೆ ತೃಪ್ತಿ. ಆದರೆ ಬಿಡುಗಡೆ ಮಾಡಬೇಕು. ಮಾಡಲಿಲ್ಲ ಎಂದು ಹೇಳುವುದು ಅಷ್ಟೇ.

ಶ್ರೀ ಐ. ಎಂ. ಜಯರಾಮ ಶೆಟ್ಟಿ : ಒಬ್ಬ ಕಂಟ್ರಾಕ್ಟರ್ ಸಹ ಇನ್ನೊಂದು ಕೆಲಸ ಮಾಡುವುದಿಲ್ಲ ಎನ್ನುವ ರೀತಿಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬಂದಿದ್ದಾರೆ. ಏಕೆಂದರೆ ಇವರು ಹಣ ಬಿಡುಗಡೆ ಮಾಡುತ್ತಿಲ್ಲ. ಡಿಸಿ ಅಪ್ರೂವಲ್ ಕೊಡುತ್ತಿಲ್ಲ. ಎಸ್ಟಿಮೇಟ್ ಆಗಿದೆ, ಅಪ್ರೂವಲ್ ಕೊಡುತ್ತಿಲ್ಲ. ನಿಮ್ಮ ಇಲಾಖೆಯಿಂದಲೇ ಮಾಡಿ ಆದರೆ ಆ ಕೆಲಸ ಆಗಬೇಕು. ಅಲ್ಲಿಮನೆ ಹೋಗುತ್ತಿದೆ, ಕೃಷಿ ಭೂಮಿ ಹೋಗುತ್ತಿದೆ ಕೃಷಿ ಹೋಗುತ್ತಿದೆ.

ಶ್ರೀ ತಿಪ್ಪೇಸ್ವಾಮಿ : ನಮ್ಮ ಹಿರಿಯ ಸದಸ್ಯರಾದ ಮಾನ್ಯ ವೀರಪ್ಪ ಮೊಯಿಲಿ ಅವರು ಹೇಳಿದಂತಹ ಮಾತನ್ನು ನಾನು ಒಪ್ಪುತ್ತೇನೆ. ಈಗೇನು ಕಾಮಗಾರಿಯನ್ನು ಡಿಸಿ ಗ್ರಾಂಟ್‌ನಿಂದ ಕೊಡುವುದಿಲ್ಲ ಎಂದು ಹೇಳಿರುವುದನ್ನು ನಾನೂ ಕೇಳಿದ್ದೇನೆ. ಅವರ ಕಳಕಳಿ ಏನು ಎಂದರೆ ನಾವು ಈಗ ಎಮರ್ಜನ್ಸಿಯಾಗಿ ಅಲ್ಲಿ ಕೆಲಸ ನಡೆಸುತ್ತಿದ್ದೇವೆ. ಅದಕ್ಕೆ ಹಣ ಬರದಿದ್ದರೆ ನೀವು ಹೇಗೆ ಮಾಡುತ್ತೀರಿ ಎನ್ನುವ ಅಭಿಪ್ರಾಯವನ್ನು ವ್ಯಕ್ತ ಪಡಿಸಿದ್ದಾರೆ. ನಾವು ಇವತ್ತು ಕೆಲಸ ಮಾಡಿದ ಹಣವನ್ನು ಕೊಟ್ಟೇ ಕೊಡುತ್ತೇವೆ. ಆದಷ್ಟು ನಮ್ಮ ಹಣಕಾಸಿನ ಮಂತ್ರಿಗಳನ್ನು ಅಲ್ಲಿಂದ ಬಂದ ತಕ್ಷಣ ನನಗೆ ಒಂದಿಷ್ಟು ಹಣ ಕೊಡಿ ಎಂದು ಕೇಳಿದ್ದೇನೆ. ಕಂಟ್ರಾಕ್ಟರ್‌ಗಳಿಗೆ ನಮ್ಮ ಮೈನರ್ ಇರಿಗೇಷನ್ ವತಿಯಿಂದ ಹಣವನ್ನು ಕೊಟ್ಟೇ ಕೊಡಿಸುತ್ತೇವೆ. ಆ ಸಂಶಯ ಬೇಡವೆಂದು ತಮ್ಮ ಮೂಲಕ ಸದಸ್ಯರಿಗೆ ಹೇಳಲಿಕ್ಕೆ ಇಚ್ಛಿಪಡುತ್ತೇನೆ.